ಬೆರೆಸಿ ಮೈಗೆ ಹೊಯ್ದುಕೊಳ್ಳುವ ಸುಖವನ್ನು ಅನುಭವಿಸುತ್ತಲೇ ಆ ಬಗ್ಗೆ ವಿವರಣೆ ನೀಡುತ್ತಿದ್ದ ಸಂತೋಷ, ಕೇಳಿಸಿಕೊಳ್ಳುತ್ತಿದ್ದ ಮನೀಷ ಇಬ್ಬರೂ ಮೂರ್ತಿರಾಯರ ಉಚ್ಚಾರವನ್ನು ಕೇಳಿದ್ದೇ ಅಚ್ಚರಿಗೊಳಗಾದರು! ನಾಗರಿಕ ಜಗತ್ತಿನ ಮನುಷ್ಯಾಕೃತಿಗಳೇ ಕಾಣದ ಈ ದಟ್ಟ ಕಾಡಿನ ನಡುವೆ ಅಪರಿಚಿತ ವ್ಯಕ್ತಿಯೋರ್ವ ಇಂಗ್ಲಿಷ್ ಪದ ಬಳಸಿದ್ದು ಅವರಿಗೆ ಶಾಕ್ ಕೊಟ್ಟಿತ್ತು. ಹದಬಿಸಿಯ ನೀರಿನ ಸ್ನಾನ ಕೊಡುವ ಮಂಪರು, ತಿಳಿ ಎಚ್ಚರ, ಹಗುರಾಗುವಿಕೆಯನ್ನು ಅನುಭವಿಸುತ್ತ, ಈ ಶಾಕ್‌ನಿಂದ ಹೊರಬರಲು ಒದ್ದಾಡುತ್ತಿದ್ದಾಗ ಮತ್ತೆ ಎರಡು ಟವೆಲ್ ತಂದು ಅವರ ಕೈಗಿತ್ತರು.

ಈ ಬಾರಿ ನಸುಗತ್ತಲಿನ ಮನೆಯೊಳಗಿಂದಲೇ ಅವರು ಅಂಗಳಕ್ಕೆ ಬಂದರು. ‘ನಿಮ್ಮ ಬಟ್ಟೆಗಳಲ್ಲಿನ ಸಾಮಗ್ರಿಗಳನ್ನು ತೆಗೆದಿಡಿ. ತೊಟ್ಟ ಬಟ್ಟೆಗಳ ಆಸೆ ಇನ್ನು ಬಿಟ್ಟುಬಿಡಿ’ ಎನ್ನುತ್ತ ಒಂದು ಅಗಲ ಹರಿವಾಣದಲ್ಲಿ ಅರಿಸಿನ ಬಣ್ಣದ ಗಟ್ಟಿ ದ್ರಾವಣವನ್ನು ತಂದು ಎದುರಿಟ್ಟರು. ‘ಇದನ್ನ ಹಚ್ಚಿಕೊಳ್ಳಿ, ಉಂಬಳ ಕಡಿದ ನಂಜು ಹೋಗುತ್ತದೆ. ಬಟ್ಟೆಗೆ ತಾಗುತ್ತದೆ ಅಂತ ಬೇಜಾರು ಬೇಡ. ಹಚ್ಚಿಕೊಂಡಾದ ನಂತರ ಊಟ ಮಾಡೋಣ, ಏನಿಲ್ಲ, ಕೆಂಪಕ್ಕಿ ಅನ್ನ, ಸೂಜು ಮೆಣಸಿನ ಖಡಕ್ಕಾದ ಸಾರು, ಕೆಸುವಿನ ಗಡ್ಡೆ ಪಲ್ಯ’ ಎಂದು ಹೋಟೆಲ್‌ಗಳಲ್ಲಿ ಮೆನೂ ಹೇಳುವಂತೆ ಹೇಳಿ ಮತ್ತೆ ಮರೆಯಾದರು. ಕರ್ನಾಟಕದವನಾದ ಸಂತೋಷನಿಗೆ ಬೇರೆ ಬೇರೆ ಪ್ರದೇಶದ ಕನ್ನಡದ ಮಾತುಗಳು ಅರ್ಥವಾಗುತ್ತಿದ್ದವು. ಉತ್ತರ ಭಾರತದ ಮನೀಷ ಇನ್ನೂ ಅರೆಬರೆ ಕನ್ನಡ ಕಲಿತಿದ್ದ ಕಾರಣ ಸಹಜವಾದ ಆಡುಭಾಷೆ ತಿಳಿಯುತ್ತಿರಲಿಲ್ಲ. ಆಗೆಲ್ಲ ಸಂತೋಷನೇ ಅವನ್ನು ತರ್ಜುಮೆ ಮಾಡಿ ಹೇಳಬೇಕಿತ್ತು.

ಸಂತೋಷನಿಗೆ ಮೂರ್ತಿರಾಯರ ಚರ್ಯೆ ವಿಭಿನ್ನವೆನ್ನಿಸತೊಡಗಿತು. ಮುಖದ ಭಾವ, ಧ್ವನಿ ಸ್ನೇಹಶೀಲವಾಗಿದ್ದರೂ ಮಾತಿನ ಸ್ವರದಲ್ಲಿ ಒಂದು ತೆರನಾದ ಆದೇಶ ನೀಡುವ ಛಾಯೆ ಕಾಣಿಸುತ್ತಿತ್ತು. ‘ನಾವು ಹವ್ಯಾಸಿಗಳ ಹಾಗೆ ಚಾರಣಕ್ಕೆ ಬಂದವರಲ್ಲ, ಯಾವುದ್ಯಾವುದೋ ಕಾಡು ಅಲೆದು ನುರಿತವರು, ಸ್ವಯಂಸಿದ್ಧಿ, ತುಂಬಿ ತುಳುಕುವ ಆತ್ಮವಿಶ್ವಾಸ, ಮಾಹಿತಿ ಲೋಕಕ್ಕೆ ಒಂದಿಲ್ಲೊಂದು ವಿಸ್ಮಯದ, ವೈಶಿಷ್ಟ್ಯದ ಸಂಗತಿಗಳನ್ನು ಪುರಾವೆ ಸಹಿತ ಒದಗಿಸುವ ಗರ್ವ... ಇವೆಲ್ಲ ಇದ್ದೂ ಇಲ್ಯಾಕೆ ಸೋಲುತ್ತಿದ್ದೇನೆ. ಮನೀಷ ಹೇಳಿದ ಹಾಗೆ ನಾವು ದುಡುಕಿ ಈ ಯೋಜನೆ ಹಾಕಿಕೊಂಡೆವೇ? ದಿಕ್ಕು, ದಾರಿ ತಪ್ಪಿದ ಸ್ಥಿತಿಯಲ್ಲಿ ಹೇಗೋ ಈ ನೆರವು ಸಿಕ್ಕಿತು. ಆದರೆ, ಈ ಮನುಷ್ಯನ ತಾನು ಹೇಳುವದನ್ನೇ ಮಾಡಬೇಕು ಎನ್ನುವ ಧಾಟಿ ಹಿಡಿಸೋದಿಲ್ಲ’ ಎಂದು ಯೋಚಿಸುತ್ತಿದ್ದ.

‘ನಿಮ್ಮ ಯೋಚನೆ ಸರಿಯಾಗಿಯೇ ಇದೆ. ಏನ್ಮಾಡೋದು? ನಾನು ಬೆಳೆದುಬಂದ ರೂಢಿ ಹಾಗೆ. ಹಾಗಂತ ಯಾರನ್ನೂ ದಬ್ಬಾಳಿಕೆ ಮಾಡೋದಿಲ್ಲ, ನಿಮಗೆ ಸರಿ ಅನ್ನಿಸಿದರೆ ಒಪ್ಪಿ, ಇಲ್ಲಾಂದ್ರೆ ಬೇಸರವಿಲ್ಲ. ಚರ್ಚೆಗೆ ಹಿಂಜರಿತ ಅಲ್ಲ. ಸುಮ್ನೆ ಟೈಂ ವೇಸ್ಟ್’ ಎಂದು ಸಹಜವಾಗಿ ಹೇಳಿದಾಗ ಸಂತೋಷ ಅವರು ಬಳಸಿದ ಎರಡನೇ ಇಂಗ್ಲಿಷ್ ಪದ ಇದು ಎಂದುಕೊಂಡ.

ಅಡುಗೆಕೋಣೆಯ ನೆಲದ ಮೇಲಿದ್ದ ಕಟ್ಟಿಗೆಯ ಒಲೆಯ ಬೆಂಕಿಯೇ ಊಟ ಮಾಡುವವರಿಗೆ ಬೆಳಕು; ಲಾಂದ್ರ ನೆಪಕ್ಕೆ ಮಾತ್ರ. ಮೂರು ಕುಡಿ ಬಾಳೆಲೆಗಳನ್ನು ಹಾಸಿಟ್ಟು, ಒಲೆಯ ಮೇಲಿನ ತಾಮ್ರದ ಚರಿಗೆ ಇಳಿಸಿ, ಹಬೆಯಾಡುತ್ತಿದ್ದ ಕೆಂಪಗಿನ ಅನ್ನವನ್ನು ಬಡಿಸಿದರು. ಸಂತೋಷ, ಮನೀಷ ಅನ್ನದ ನಡುವೆ ತೋಡಿದ ಗುಂಡಿಗೆ ಅವರು ಸುರಿದ ಬಿಸಿ ಸಾರು ಬಡಿಸುವಾಗ ಮನೆಯಲ್ಲಿ ಮತ್ಯಾರಿದ್ದ ಹಾಗಿಲ್ಲ, ಒಬ್ಬರೇ ಅಡುಗೆ ಮಾಡಲು ಇಷ್ಟು ಬೇಗ ಸಾಧ್ಯವೇ? ಎನ್ನುವ ವಿಸ್ಮಯ ಇಬ್ಬರಿಗೂ ಆಯಿತು. ಆ ಬಗ್ಗೆ ಕೇಳಬೇಕೆನ್ನಿಸಿದರೂ ಯಾಕೋ ತಡೆಯುತ್ತಿತ್ತು. ಮೂರ್ತಿರಾಯರನ್ನು ಕಂಡ ಕ್ಷಣದಿಂದ ಅವರು ಹಂತ ಹಂತವಾಗಿ ನಿಗೂಢವೆನ್ನಿಸತೊಡಗಿದ್ದರು.

ಊಟ ಮುಗಿಸಿ ಮೂರ್ತಿರಾಯರು ಒಳಗಿನಿಂದ ಬರುವ ತನಕ ಸಂತೋಷ, ಮನೀಷ ಬೆಂಕಿಯ